# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 794 |
| **ಮಾನ್ಯ ಸದಸ್ಯರ ಹೆಸರು** | : | ಶ್ರೀ ಟಿ.ಎನ್.ಜವರಾಯಿಗೌಡ (ವಿಧಾನಸಭೆಯಿಂದ ಚುನಾಯಿತರಾದವರು) |
| **ಉತ್ತರಿಸಬೇಕಾದ ದಿನಾಂಕ** | : | 13.03.2025 |
| **ಉತ್ತರಿಸುವ ಸಚಿವರು** | : | ಕಾನೂನು, ನ್ಯಾಯ, ಮಾನವ ಹಕ್ಕುಗಳು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ನಂದಿಬೆಟ್ಟದಲ್ಲಿ ರೋಪ್ ವೇ ಯೋಜನೆ ಸೇರಿದಂತೆ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ; (ಮಾಹಿತಿ ಒದಗಿಸುವುದು) | ಪ್ರವಾಸೋದ್ಯಮ ಇಲಾಖೆ ವತಿಯಿಂದ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ನಂದಿಬೆಟ್ಟದಲ್ಲಿ ರೋಪ್ ವೇ ಯೋಜನೆ ಸೇರಿದಂತೆ ಕೈಗೊಂಡಿರುವ ವಿವಿಧ ಕಾಮಗಾರಿಗಳ ವಿವರ ಹಾಗೂ ಖರ್ಚು ಮಾಡಿರುವ ವಿವರ **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಈ ರೋಪ್ ವೇ ಮತ್ತು ಕೈಗೊಳ್ಳುತ್ತಿರುವ ವಿವಿಧ ಕಾಮಗಾರಿಗಳಿಗೆ ಸರ್ಕಾರ ಖರ್ಚು ಮಾಡುತ್ತಿರುವ ಮೊತ್ತವೆಷ್ಟು;(ಮಾಹಿತಿ ಒದಗಿಸುವುದು) | |
| ಇ) | ರೋಪ್ ವೇ ಸೇರಿದಂತೆ ವಿವಿಧ ಅಭಿವೃದ್ಧಿ ಕಾಮಗಾರಿಗಳಿಂದ ನಂದಿ ಬೆಟ್ಟಕ್ಕೆ ತೀವ್ರ ಅಪಾಯವಿರುವುದರಿಂದ ತಕ್ಷಣವೇ ಈ ಕಾಮಗಾರಿಗಳನ್ನು ನಿಲ್ಲಿಸಬೇಕು ಎಂದು ಪರಿಸರವಾದಿಗಳು ಮತ್ತು ಭೂವಿಜ್ಞಾನಿಗಳು ಸರ್ಕಾರವನ್ನು ಎಚ್ಚರಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು;(ವಿವರ ನೀಡುವುದು) | ಹೌದು, ಬಂದಿದೆ.<br><br>ರೋಪ್ ವೇ ಕಾಮಗಾರಿಗೆ ಸಂಬಂಧಿಸಿಂತೆ, ಇಲ್ಲಿನ ಪರಿಸರದ ಮೇಲೆ ಬೀರುವ ಪ್ರಭಾವದ ಮೌಲ್ಯಮಾಪನ ವರದಿ (Environment Impact Assessment Report) ಅನ್ನು ನುರಿತ ತಜ್ಞರಿಂದ ತಯಾರಿಸಲಾಗುತ್ತಿದ್ದು, ಸದರಿ ವರದಿಯು ನಿರೀಕ್ಷೆಯಲ್ಲಿರುತ್ತದೆ. |
| ಈ) | ಅಪಾಯದ ಅಂಚಿಗೆ ಸಿಲುಕಿರುವ ನಂದಿಬೆಟ್ಟದಲ್ಲಿ ಪ್ರವಾಸಿಗರ ಸಂಖ್ಯೆ ವಿಪರೀತ ಏರಿಕೆಯಾಗುತ್ತಿದ್ದು, ರೆಸಾರ್ಟ್‌ಗಳು ಹೆಚ್ಚಾಗುತ್ತಿರುವುದರ ಜೊತೆಗೆ ಅಲ್ಲಿನ ಪ್ರಕೃತಿಯ ಸೊಬಗಿನ ಮೇಲೆ ಒತ್ತಡವಿರುವ ಕಾರಣ ನಂದಿ ಬೆಟ್ಟ ಉಳಿಸಿ ಎಂದು ಸರ್ಕಾರದ ವಿವಿಧ 11 ಇಲಾಖೆಗಳಿಗೆ ವರದಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಹೌದು, ಬಂದಿದೆ.<br><br>ನಂದಿ ಗಿರಿಧಾಮಕ್ಕೆ ಭೇಟಿ ನೀಡುವ ಪ್ರವಾಸಿಗರ ಖಾಸಗಿ ವಾಹನಗಳಿಗೆ ನಂದಿಗಿರಿಧಾಮದ ಮೇಲ್ಭಾಗಕ್ಕೆ ಸಂಚಾರವನ್ನು ನಿರ್ಬಂಧಿಸಲು ಹಾಗೂ ಇಲ್ಲಿನ ಪರಿಸರ ಮಾಲಿನ್ಯವನ್ನು ತಪ್ಪಿಸಲು ವಿದ್ಯುತ್ ಚಾಲಿತ ವಾಹನಗಳ ಮೂಲಕ ಸಾರ್ವಜನಿಕರನ್ನು ಕೊಂಡೊಯ್ಯುವ ಯೋಜನೆಯನ್ನು ಅನುಷ್ಠಾನಗೊಳಿಸಲು ಉದ್ದೇಶಿಸಲಾಗಿದೆ.<br><br>ಮುಂದುವರೆದು, ನಂದಿ ಗಿರಿಧಾಮದಲ್ಲಿ ವಾರಾಂತ್ಯಗಳಲ್ಲಿ ಮೇಲ್ಭಾಗದಲ್ಲಿ ಹೆಚ್ಚುತ್ತಿರುವ ವಾಹನ ದಟ್ಟಣೆಯನ್ನು ನಿಯಂತ್ರಿಸಲು ನಂದಿ ಗಿರಿಧಾಮದ ಕೆಳಭಾಗದಲ್ಲಿ ಪ್ರವಾಸಿಗರ / ಸಾರ್ವಜನಿಕ ವಾಹನಗಳ ಪಾರ್ಕಿಂಗ್ ವ್ಯವಸ್ಥೆಯನ್ನು ಕಲ್ಪಿಸಲು ಉದ್ದೇಶಿಸಲಾಗಿದೆ.<br><br>ಇದರಿಂದಾಗಿ, ನಂದಿ ಗಿರಿಧಾಮದ ವನ್ಯ ಜೀವಿಗಳಿಗೆ ಹಾಗೂ ಪ್ರಕೃತಿ ಸೊಬಗಿಗೂ ಅಡ್ಡ ಪರಿಣಾಮ ಉಂಟಾಗದಂತೆ ಹಾಗೂ ಪರಿಸರ ಮಾಲಿನ್ಯ ಸಹ ಉಂಟಾಗದಂತೆ ಇಲಾಖೆಯು ಅಗತ್ಯ ಮುಂಜಾಗ್ರತೆ ಕ್ರಮಗಳನ್ನು ವಹಿಸುತ್ತಿದೆ. |
| ಉ) | ಬಂದಿದ್ದಲ್ಲಿ, ಸಲ್ಲಿಸಿರುವ ವರದಿಯಲ್ಲಿ ಶಿಫಾರಸ್ಸುಗಳಾವುವು ಹಾಗೂ ಇಲಾಖೆಗಳು ಈ ವರದಿಯ ಮೇಲೆ ಏನೇನು ಕ್ರಮ ತೆಗೆದುಕೊಂಡಿವೆ? (ವಿವರ ನೀಡುವುದು) | |

**ಸಂಖ್ಯೆ:TOR 72 TDV 2025**

(ಎಚ್.ಕೆ.ಪಾಟೀಲ)
ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪ್ರವಾಸೋದ್ಯಮ ಸಚಿವರು

<u>ವಿಧಾನ ಪರಿಷತ್ತಿನ ಪ್ರಶ್ನೆ ಸಂಖ್ಯೆ.659(794)ಕ್ಕೆ ಅನುಬಂಧ</u>

**ಪ್ರವಾಸೋದ್ಯಮ ಇಲಾಖೆ ವತಿಯಿಂದ ಪ್ರವಾಸಿಗರನ್ನು ಆಕರ್ಷಿಸುವ ಸಲುವಾಗಿ ಹಾಗೂ ಮತ್ತಷ್ಟು ಉತ್ತೇಜಿಸಲು ನಂದಿ ಗಿರಿಧಾಮದಲ್ಲಿ ರೋಪ್ ವೇ ಯೋಜನೆ ಸೇರಿದಂತೆ ಕೈಗೊಂಡಿರುವ ವಿವಿಧ ಕಾಮಗಾರಿಗಳ ಹಾಗೂ ಖರ್ಚು ಮಾಡಿರುವ ವಿವರ.**

**<u>ರೋಪ್ ವೇ ಯೋಜನೆ:</u>**

ನಂದಿ ಗಿರಿಧಾಮದಲ್ಲಿ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಪಿ.ಪಿ.ಪಿ. ಮಾದರಿಯಲ್ಲಿ ರೋಪ್-ವೇ ಅಳವಡಿಸುವ ಯೋಜನೆಯ ವಿನ್ಯಾಸ, ನಿರ್ಮಾಣ, ಹಣಕಾಸು, ಕಾರ್ಯಾಚರಣೆ ಮತ್ತು ವರ್ಗಾವಣೆ (DBFOT) ಆಧಾರದ ಮೇಲೆ ನಂದಿ ಬೆಟ್ಟದಲ್ಲಿ ಪ್ರಯಾಣಿಕರ ರೋಪ್-ವೇಗಳ ಅಭಿವೃದ್ಧಿ ಮತ್ತು ಕಾರ್ಯಾಚರಣೆ ಕಾಮಗಾರಿಯನ್ನು ಖಾಸಗಿ ರಿಯಾತಿಯಿದಾರರನ್ನು ಆಯ್ಕೆ ಮಾಡಿ ದಿನಾಂಕ: 23/02/2022 ರಂದು ರಿಯಾಯಿತಿ ಒಪ್ಪಂದದಂತೆ ರೂ.93.40 ಕೋಟಿಗಳ ವೆಚ್ಚದಲ್ಲಿ ರೋಪ್ ವೇ ನಿರ್ಮಾಣ ಮಾಡಲಾಗುತ್ತಿದೆ.

ಸದರಿ ರೋಪ್ ವೇ ಯೋಜನೆಯು ಪಿಪಿಪಿ ಮಾದರಿಯಲ್ಲಿ ಕೈಗೊಳ್ಳುತ್ತಿರುವುದರಿಂದ ಯಾವುದೇ ಅನುದಾನ ವೆಚ್ಚ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.

**ನಂದಿ ಗಿರಿಧಾಮದಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಕೈಗೊಂಡಿರುವ ವಿವಿಧ ಇತರೆ ಕಾಮಗಾರಿಗಳ ವಿವರ.**

(ರೂ.ಲಕ್ಷಗಳಲ್ಲಿ)

| Sl No | Description | | Estimated Cost | Monitoring Agency | Implementing Agency |
|---|---|---|---|---|---|
| 1 | 2022-23ನೇ ಸಾಲಿನಲ್ಲಿ ನಂದಿ ಗಿರಿಧಾಮದಲ್ಲಿ ಜಿ-20 ಶೃಂಗಸಭೆ ಅಡಿಯಲ್ಲಿ ವಿವಿಧ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ಕಾಮಗಾರಿಗಳನ್ನು | CONSTRUCTION OF PATHWAY AND STEPS FROM PINE TOP RESTAURANT TO NALLIKAYI BASAVANNA TEMPLE | 22.00 | KTIL | DEPARTMENT OF STATE ARCHEOLOGY |
| 2 | | PROVIDING FENCING FROM PINE TOP RESTOURANT TO NELLIKAYI BASAVANNA TEMPLE | 15.00 | KTIL | DEPARTMENT OF STATE ARCHEOLOGY |
| 3 | | PROVIDING ILLUMINATION TO FORT WALL AND OTHER BUILDING AT NANDI HILLS | 50.00 | KTIL | KTIL |
| 4 | | CONSERVATION OF PUSHKARNI | 15.00 | KTIL | DEPARTMENT OF STATE ARECHOLOGY |
| 5 | | PROVIDING PAINTING AND RENOVATION OF KSTDC BUILDINGAND FENCING WORKS | 96.00 | KTIL | KTIL |
| 6 | | RENOVATION OF FOOD COURT OF KSTDC | 30.00 | KTIL | KTIL |
| 7 | | REPAIR AND MAINTENANCE (PAINTING) FOR MS STRUCTURE FOR VIEW POINT AT NANDI | 50.00 | KTIL | KTIL |

(ರೂ.ಲಕ್ಷಗಳಲ್ಲಿ)

| Sl No | Description | | Estimated Cost | Monitoring Agency | Implementing Agency |
|---|---|---|---|---|---|
| 8 | | PROVIDING AND FIXING OF SEATING ARRENGEMENTS (50 STONE BENCHES) AT DUSTBIS AT NANDI HILLS | 12.00 | KTIL | KTIL |
| 9 | | CONSERVATION OF SECOND ENTERANCE FORTWALL INCLUDING PROVDING WOODEN DOOR,RESETTING OF STEPS FROM PARKING TO SECONFD ENTERANCE AND CONSERVATION OF FORT WALL NEAR PARKING AREA AND DEMOLIATION OF EXISTING SECURITY CABIN INFRONT OF FORTGATE | 70.00 | KTIL | DEPARTMENT OF STATE ARECHOLOGY |
| 10 | | DEMOLISTION OF EXISTING BUILDING NEAR PARKING AREA HOPCOMS AND OTHER BUILDING AND TOILETS | 20.00 | KTIL | KTIL |
| 11 | | CIRCLE DEVELOPMENT NEAR PWD AND BESCOM GUEST HOUSE AND PROVDING INTERLOCKING PAVERS | 60.00 | KTIL | KTIL |
| 12 | | CONSTRUCTION OF KISOK, TOILETS AND PROVDING DRINKING WATER | 60.00 | KTIL | KTIL |
| 13 | 2023-24ನೇ ಸಾಲಿನಲ್ಲಿ ನಂದಿ ಗಿರಿಧಾಮದಲ್ಲಿ ಪ್ರವಾಸಿ ಸೌಲಭ್ಯಗಳ ಅಭಿವೃದ್ಧಿ ಹೆಚ್ಚುವರಿ ಕಾಮಗಾರಿಗಳು | | 80.00 | KTIL | KTIL |
| | | **TOTAL** | **580.00** | | |